**ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC-992/2020**

ದಿನಾಂಕ 07-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಃ | ಡಾ.  ಸುಧೀಂದ್ರ ದೇಶಮುಖ RW-1 |
| ತಂದೆಯ ಹೆಸರು | ಃ | ಪ್ರಭಾಕರರಾವ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | Casualty Medical Officer, ಕಾಮರೆಡ್ಡಿ ಆಸ್ಪತ್ರೆ ಕಲ್ಬುರ್ಗಿ |
| ವಾಸಸ್ಥಳ | ಃ | ಕಲ್ಬುರ್ಗಿ |

**ಮುಖ್ಯ ವಿಚಾರಣೆ ಶ್ರೀ VCMP 2ನೇ ಎದುರುದಾರರ ಪರ  ವಕೀಲರಿಂದ**

ನಾನು 2013 ರಿಂದ ಇಲ್ಲಿಯವರೆಗೆ ಕಲ್ಬುರ್ಗಿಯ ಕಾಮರೆಡ್ಡಿ ಆಸ್ಪತ್ರೆಯಲ್ಲಿ Casualty Medical Officer ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಮ್ಮ ಆಸ್ಪತ್ರೆಗೆ ಯಾವುದೇ ರಸ್ತೆ ಅಪಘಾತದಲ್ಲಿ ಗಾಯಾಳು ಬಂದಿದ್ದರೆ ಆತನನ್ನು ಪರೀಕ್ಷಿಸಿ ಆತನಿಗೆ ಆದ ಗಾಯಗಳನ್ನು ನಮೂದಿಸಿ ಅದನ್ನು MLC ಮಾಡಿ ನಾನೇ ಪೊಲೀಸರಿಗೆ ಮಾಹಿತಿ ನೀಡುತ್ತೇನೆ.

ದಿನಾಂಕ 30-06-2020ರಂದು ಬೆಳಿಗ್ಗೆ 07-00 ಗಂಟೆ ಸುಮಾರಿಗೆ ಗಾಯಾಳು ಸಂಗಪ್ಪ ತಂದೆ ಭೀಮರಾಯರವರನ್ನು ರಸ್ತೆ ಅಪಘಾತ ದವಿಚಾರವಾಗಿ ಬಂದಿದ್ದರು. ಸದರಿ ಗಾಯಾಳುವಿಗೆ ಆದಂತಹ ಗಾಯಗಳನ್ನು ನಾನು ಆಸ್ಪತ್ರೆಗೆ ದಾಖಲಾತಿಯಲ್ಲಿ ನಮೂದಿಸಿಕೊಂಡಿರುತ್ತೇನೆ ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ MLC ಮಾಹಿತಿಯನ್ನು ಪೊಲೀಸ್ ಠಾಣೆಗೆ ರವಾನಿಸಿರುತ್ತೇನೆ.

ಸಾಕ್ಷಿ MLC ದಾಖಲಾತಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-1 ಎಂದು ಗುರುತಿಸಲಾಯಿತು.

(ಶ್ರೀ VCMP 2ನೇ ಎದುರುದಾರರ ಪರ ವಕೀಲರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಸಾಕ್ಷಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಶ್ರೀ VCMP 2ನೇ ಎದುರುದಾರರ ಪರ ವಕೀಲರಿಂದ**

ಅಪಘಾತದಲ್ಲಿ ಗಾಯಗೊಂಡು ಗಾಯಾಳು ನಮ್ಮ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ನಾವು ಆತ ದಾಖಲಾಗಿದ್ದ ದಿನಾಂಕ ಸಮಯ ಹಾಗೂ ಆತನಿಗೆ ಏನು ಗಾಯವಾಗಿದೆ ಎಂದು ಹಾಗು ಗಾಯದ ಹಿನ್ನಲೆಯನ್ನು ನಮೂದಿಸಿಕೊಂಡು MLC ಮಾಹಿತಿ ನೀಡುತ್ತೇನೆ. ಪ್ರಸ್ತುತ ಪ್ರಕರಣ Road Traffic Accident ಪ್ರಕರಣ ಆಗಿದೆ. ನಿ.ಆರ್-1 ರ ದಾಖಲಾತಿಯಲ್ಲಿ ಸಮಯ ಏನು ನಮೂದು ಆಗಿದೆ ಎಂದರೆ ಸಾಕ್ಷಿಗೆ ನಿ.ಆರ್-1 ರ ತೋರಿಸಿ ಅದರಲ್ಲಿ ಸಮಯ ರಾತ್ರಿ 01-00 a.m. ಆಗಿದೆ ಎಂದು ನುಡಿಯುತ್ತಾರೆ. ಪೊಲೀಸ್ ದೂರಿನ ಪ್ರಕಾರ ದಿನಾಂಕ 29-06-2020 ರಂದು ರಾತ್ರಿ 08-00 ಗಂಟೆಗೆ ಆಗಿದೆ ಅಂತಾ ನಮೂದು ಆಗಿದೆ ಎಂದರೆ ಸಾಕ್ಷಿ ನಾನು MLC ದಾಖಲಾತಿಯಲ್ಲಿ 30-06-2020ರ 01-00 a.m. ಅಂತಾ ನಮೂದಿಸಿರುತ್ತೇನೆಂದು ನುಡಿಯುತ್ತಾರೆ. ನಮ್ಮ ಆಸ್ಪತ್ರೆಗೆ ರಸ್ತೆ ಅಪಘಾತದ ಹಿನ್ನಲೆಯಲ್ಲಿ ಗಾಯಾಳು ದಾಖಲಾಗಿದ್ದರೆ ನಾವು ಪೊಲೀಸರಿಗೆ ಸದರಿ ಗಾಯಾಳುವಿಗೆ ಆದ ಅಪಘಾತದ ದಿನಾಂಕ ಮತ್ತು ಸಮಯ ನಮೂದಿಸಿ MLC ದಾಖಲಾತಿ ನೀಡುತ್ತೇವೆ ಎಂದರೆ ಸಾಕ್ಷಿ ನಾವು ಅಪಘಾತ ದಿನಾಂಕ ಸಮಯ ನಮೂದು ಮಾಡುವುದಿಲ್ಲ ಆದರೆ ಗಾಯಾಳು ನಮ್ಮ ಆಸ್ಪತ್ರೆಗೆ ದಾಖಲಾದ ದಿನಾಂಕ ಸಮಯ ನಮೂದು ಮಾಡುತ್ತೇವೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಶಾನೆ ಆರ್ 1 ರ ದಾಖಲಾತಿ ತೋರಿಸಲಾಗಿ ಅದರಲ್ಲಿ ನಮೂದು ಆಗಿರುವ ದಿನಾಂಕ ಮೊದಲು 2 ಅಂತಾ ಬರೆದು ಆ ನಂತರ 3 ಅಂತಾ ತಿದ್ದಲಾಗಿದೆ ಎಂದರೆ ಸರಿಯಲ್ಲ. ಅಪಘಾತ ದಿನಾಂಕ 29-06-2020 ರಂದು ರಾತ್ರಿ 8 ಗಂಟೆಗೆ ಆಗಿದ್ದು ನಾನು MLC ದಾಖಲಾತಿಯನ್ನು 30-06-2020 ರಂದು ರಾತ್ರಿ 1.00 a.m. ಆಗಿದೆ ಅಂತಾ ಮಾಹಿತಿ ನಮೂದಿಸಿ MLCಯಲ್ಲಿ ಸುಳ್ಳು ಮಾಹಿತಿ ನಮೂದಿಸಿ ನೀಡಿರುತ್ತೇನೆಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡಲೆಂದು ಸುಳ್ಳು MLC ಮಾಹಿತಿ ನೀಡಿರುತ್ತೇನೆಂದರೆ ಸರಿಯಲ್ಲ.

ಅಪಘಾತದಲ್ಲಿ ಗಾಯಾಳು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅಪಘಾತ ಹೇಗೆ ಯಾವಾಗ ಹಾಗೂ ಎಷ್ಟು ಗಂಟೆಗೆ ಹಾಗೂ ಯಾವ ಸ್ಥಳದಲ್ಲಿ ಆಗಿರುತ್ತದೆ ಎನ್ನುವ ಬಗ್ಗೆ ನಮೂದು ಮಾಡಿಕೊಳ್ಳುತ್ತೇವೆ ಎಂದರೆ ನಿಜ. ನಿಶಾನೆ ಆರ್-1ರ ದಾಖಲಾತಿಯಲ್ಲಿ ಅಪಘಾತ ಹೇಗೆ ಎಲ್ಲಿ ಯಾವಾಗ ಆಗಿದೆ ಎಂದು ನಮೂದು ಮಾಡಿಲ್ಲ ಎಂದರೆ ನಿಜ. ಗಾಯಾಳುವಿಗೆ ಸಹಾಯ ಮಾಡಲೆಂದು ಹಾಗೂ ನಿಜಸಂಗತಿಯನ್ನು ಮುಚ್ಚಿಡಲು ಅಪಘಾತದ ಸಮಯ ಹಾಗೂ ಸ್ಥಳ ನಮೂದಿಸದೇ MLC ಮಾಹಿತಿ ನೀಡಿರುತ್ತೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ SAK ಅರ್ಜಿದಾರರ ಪರ  ವಕೀಲರಿಂದ</u>**

ನಿಶಾನೆ ಆರ್-1ರ ದಾಖಲಾತಿಯಲ್ಲಿ ಗಾಯಾಳು ದಾಖಾಲಾದ ಸಮಯ 07-00 a.m ಅಲ್ಲ 01-00 a.m. ಎಂದರೆ ನಿಜ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ